ಪಕ್ಕದ ಮನೆಯಾಕೆ ನಗುನಗುತ್ತಾ ಇವರ ಹಿತ್ತಲಿಗೆ ಬಂದು ಈಕೆಯೊಂದಿಗೆ ಒಂದಷ್ಟು ಮಾತನಾಡಿ, ಸ್ವಲ್ಪ ಕರಿಬೇವು ಕಿತ್ತುಕೊಂಡು ಹೋದಳು. ತನ್ನ ಆದೇಶವನ್ನು ಧಿಕ್ಕರಿಸಿ, ಮುಂದುವರೆದ ಇವರ ಸ್ನೇಹವನ್ನು ಕಂಡು ಈತ ಕೆಂಡವಾದ. 'ನಿಮ್ಮಿಬ್ಬರ ಸ್ನೇಹವನ್ನು ಹೇಗೆ ತುಂಡಾಗಿ ಕತ್ತರಿಸಬೇಕೆಂದು ನನಗೆ ಗೊತ್ತು' ಎಂದು ಹೇಳುತ್ತಾ ಹೆಂಡತಿಯ ಮೇಲೆ ಕೂಗಾಡಿದ.

ಮಾರನೆಯ ದಿನ ಬೆಳಗ್ಗೆ ಈಕೆ ತನ್ನ ಮನೆಯ ಹಿತ್ತಲಿಗೆ ಬಂದಾಗ, ಅಲ್ಲಿ ಕರಿಬೇವಿನ ಮರ ಅನಾಥ ಶವದಂತೆ ನೆಲಕ್ಕೆ ಬಿದ್ದಿತ್ತು. ಗಂಡನ ಕೃತ್ಯವನ್ನು ಕಂಡು ಕಂಗಾಲಾದ ಇವಳಿಗೆ ನೆಲಕ್ಕೆ ಬಿದಿದ್ದ ಮರವನ್ನು ಕಂಡು ಕರುಳು ಚುರ್ ಎಂದಿತು. ತನ್ನ ಮಗುವಿನಂತೆ ಸಾಕಿದ್ದ, ಸುತ್ತಮುತ್ತಲ ಮನೆಯವರಿಗೆಲ್ಲಾ ಬಹಳ ವರ್ಷಗಳಿಂದ ಒಗ್ಗರಣೆಗೆ ಬೇಕಾಗಿದ್ದ, ಎರಡು ಮನೆಗಳ ಸ್ನೇಹದ ಸಂಕೇತದಂತಿದ್ದ ಕರಿಬೇವಿನ ಮರವನ್ನು, ಧರ್ಮದ ಅಮಲು ಏರಿಸಿಕೊಂಡ ಪತಿ ಕಡಿದು ಹಾಕಿದ್ದು ಕಂಡು ಹೆಂಡತಿಗೆ ಸಿಟ್ಟು ನೆತ್ತಿಗೇರಿತು. ಕಣ್ಣಲ್ಲಿ ನೀರು ತುಂಬಿಕೊಂಡು, ಬಿರಬಿರನೆ ಒಳಗೆ ಬಂದವಳೇ ಗಂಡನನ್ನು ಪ್ರಶ್ನಿಸಿದಳು.

'ಎಲ್ಲರಿಗೂ ಸೊಂಪಾಗಿ ಸೊಪ್ಪು ಕೊಡ್ತಾ ಇದ್ದ ಮರನ್ಯಾಕೆ ಕಡಿದೆ?'

'ಇದು ಸ್ಯಾಂಪಲ್ ಅಷ್ಟೇ. ನನ್ನ ಮಾತು ಕೇಳದಿದ್ದವರಿಗೆಲ್ಲಾ ಕೂಡ ಇದೇ ಗತಿ'.

'ನಿಮ್ಮ ಲೀಡರ್ ಇಂಥಾ ದ್ವೇಷಾನಾ ನಿನ್ನ ತಲೆಗೆ ತುಂಬಿರೋದು?'

'ನಮ್ಮ ಲೀಡರ್ ಬಗ್ಗೆ ಮಾತನಾಡೋವಷ್ಟು ಯೋಗ್ತೆ ಇದೆಯಾ ನಿಂಗೆ?'

'ಯಾವ ಧರ್ಮದೊಳಗೆ ಹೀಗೆ ಫಲ ಕೊಡೋ ಮರ ಕಡಿಯಾಕೆ ಹೇಳಿದಾರೆ?'

'ನಮ್ಮ ಧರ್ಮ ಉಳಿಸಿಕೊಳ್ಳೋಕೆ ತಲೇನೂ ಕಡೀತೀನಿ, ಪ್ರಾಣಾನೂ ಕೊಡ್ತೀನಿ'.

'ನೀನು ಪ್ರಾಣ ಕೊಡೋವಷ್ಟು ಮಹಾತ್ಮನಾ ನಿಮ್ಮ ದೊಣ್ಣೆನಾಯಕ?'

'ಅವರು ವಜ್ರ ಕಣೇ, ಅವರ ಬಗ್ಗೆ ಮಾತಾಡಬೇಡ'.

'ನಮಗೆ ಬೇಕಾಗಿರೋದು ತಿನ್ನೋಕೆ ಅನ್ನ, ವಜ್ರ ಅಲ್ಲ. ನಮ್ಮ ಕಷ್ಟಕ್ಕೆ ಆಗೋದು ನೆರೆಹೊರೆಯವರೇ ಹೊರತು, ದಾರಿ ತಪ್ಪಿಸುವ ನಿಮ್ಮ ನಾಯಕ ಅಲ್ಲ'.

'ಧರ್ಮಕ್ಕಾಗಿ ಪ್ರಾಣ ಕೊಡೋದಕ್ಕೆ ಸಿದ್ಧರಿರಬೇಕು ಅಂತ ಅವರು ಯುವಕರಿಗೆ ಮಾಡಿರೋ ಭಾಷಣ ಕೇಳಿಲ್ವಾ? ಅಂತಹವರು ನಮ್ಮ ಕಷ್ಟಕ್ಕೆ ಆಗೋಲ್ವಾ?'

'ನಮ್ಮ ಯುವಕರಿಗೆ ಪ್ರಾಣ ಕೊಡೋಕೆ ತಯಾರಾಗಿ ಎಂದು ಹೇಳುವ ಅವರು ಯಾಕೆ ಅವರ ಇಬ್ಬರು ಮಕ್ಕಳನ್ನು ಫಾರಿನ್‌ನಲ್ಲಿ ಓದಿಸುತ್ತಿದ್ದಾರೆ?'

'ಬಾಯಿ ಮುಚ್ಕೊಂಡು ನಾನು ಹೇಳಿದ್ದನ್ನು ಕೇಳು. ನಮ್ಮ ನಾಯಕರನ್ನೇ ಪ್ರಶ್ನೆ ಮಾಡುವಷ್ಟು ಬುದ್ಧಿವಂತಿಕೆ ತೋರಿಸಬೇಡ'.

ಇದರ ನಂತರ ಗಂಡ ಹೆಂಡತಿ ಮಾತು ಬಿಟ್ಟರು.

ಮಗುವಿಗೆ ಜ್ವರ ಬಿಟ್ಟು ಬಿಟ್ಟು ಬರುತ್ತಿತ್ತು. ಜ್ವರ ಕಡಿಮೆಯಾಗದಿದ್ರೆ ಹಾಕುವಂತೆ ಫಿಟ್ಸ್‌ನ ಔಷಧಿಯನ್ನು ಕಳೆದ ಬಾರಿ ವೈದ್ಯರು ಕೊಟ್ಟಿದ್ದರು. ಅದನ್ನು ಹಾಕಿದರೆ ಮಗುವಿಗೆ ಫಿಟ್ಸ್ ಬರುತ್ತಿರಲಿಲ್ಲವಾದರೂ, ಮಗು ವಿಪರೀತ ನಿದ್ರೆಗೆ ಜಾರುತ್ತಿತ್ತು, ಅರ್ಧ ದಿನವಾದರೂ ಏಳುತ್ತಿರಲಿಲ್ಲ. ಈ ಔಷಧಿ ನಿದ್ರೆ ಬರುವಂತೆ ಮಾಡುತ್ತದೆ ಎಂದು ವೈದ್ಯರು ಮೊದಲೇ ಹೇಳಿದ್ದರು. ಹಾಗಾಗಿ ಈಗ ಜ್ವರ ಬಂದು ಮೂರನೇ ದಿನವಾದರೂ ಅದನ್ನು ಹಾಕಿರಲಿಲ್ಲ. ಅದೂ ಅಲ್ಲದೇ ಔಷಧಿ ಖಾಲಿ ಆದರೆ ಮತ್ತೆ ತರಲು ನಾಲ್ಕೈದು ಕಿಲೋಮೀಟರ್ ಹೋಗಬೇಕಿತ್ತು. ಈ ನಡುವೆ ಗಂಡ ರೂಮಿನಲ್ಲಿ ಸೇರಿಕೊಂಡು ಬೋಲ್ಟ್ ಹಾಕಿಕೊಂಡು ಯಾವುದಕ್ಕೋ ತಯಾರಾಗುವವನಂತೆ ಕಾಣುತ್ತಿದ್ದ. ಅನ್ಯಮನಸ್ಕನಾಗಿ ಅತ್ತಿಂದಿತ್ತ ಶತಪಥ ಹಾಕುತ್ತಿದ್ದ.

ಲೀಡರ್ ತಲೆಗೆ ಏಟು ತಿಂದು ಆಸ್ಪತ್ರೆ ಸೇರಿದ ಮೇಲೆ ಪಟ್ಟಣದಲ್ಲಿ ಗಲಭೆಗಳಾಗಿ ಅದನ್ನು ನಿಯಂತ್ರಿಸಲು ಪೊಲೀಸರು ಬೀಡುಬಿಟ್ಟಿದ್ದರು. ಅಂದು ಸಂಜೆ ಕೋಮು ಸೌಹಾರ್ದತೆಗಾಗಿ, ಶಾಂತಿ ಬಯಸುವ ಎರಡೂ ಧರ್ಮದವರು ಸೇರಿ ಪಟ್ಟಣದಲ್ಲಿ ಜಾಥಾ ಏರ್ಪಡಿಸಿದ್ದರು. ಇದರ ನೇತೃತ್ವವನ್ನು ಎರಡೂ ಧರ್ಮದ ಮುಖಂಡರು ವಹಿಸಿದ್ದರು. ಶಾಂತಿ ಬಯಸುವ ನಾಗರಿಕರೆಲ್ಲರೂ ಇದರಲ್ಲಿ ಭಾಗವಹಿಸಿ ಎಂದು ಕೋರಲಾಗಿತ್ತು.

ಈತನು ತನ್ನ ನಾಯಕನ ಮೇಲೆ ಆದ ಹಲ್ಲೆಗೆ ಪ್ರತೀಕಾರವಾಗಿ, ಆ ಧರ್ಮದ ಪ್ರಮುಖ ಮುಖಂಡನನ್ನು ಮುಗಿಸಿ ಆ ಧರ್ಮದವರಲ್ಲಿ ಭಯ ಹುಟ್ಟಿಸಿ, ಇನ್ನೊಮ್ಮೆ ಅವರು ತಂಟೆಗೆ ಬಾರದಂತೆ ಪಾಠ ಕಲಿಸಬೇಕು ಎಂದು ನಿರ್ಧಾರ ಮಾಡಿದ್ದ. ಹಾಗಾಗಿ ಇಂದು ಜಾಥಾ ಬರುವಾಗ ತಾನು ಅದರೊಳಗೆ ಗುಪ್ತವಾಗಿ ನುಸುಳಿ, 'ಆ ಧರ್ಮದ' ಮುಖಂಡನನ್ನು ಮುಗಿಸುತ್ತೇನೆ ಎಂದು ಈತ ಪಕ್ಷದ ಯಾರಿಗೋ ಫೋನಿನಲ್ಲಿ ಹೇಳುವುದನ್ನು ಹೆಂಡತಿ ಕೇಳಿಸಿಕೊಂಡಳು.

ತನ್ನ ಗಂಡ ಹಟ ಮಾಡಿದ್ದನ್ನು ಮಾಡಿಯೇ ತೀರುತ್ತಾನೆ. ಆದ್ದರಿಂದ ಅವನನ್ನು ಇದರಿಂದ ಹೇಗಾದರೂ ತಡೆಯಲೇಬೇಕು ಎಂದು ಯೋಚಿಸುತ್ತಾ ದಾರಿ ಕಾಣದೆ ಇವಳು ಬಸವಳಿದಳು. ಇವನನ್ನು ತಡೆಯುವ ಬಗೆ ಹೇಗೆ? ಅವನೊಂದಿಗೆ ಚರ್ಚಿಸಿ, ಅವನು ತನ್ನ ನಿರ್ಧಾರದಿಂದ ಹಿಂದೆ ಸರಿಯುವಂತೆ ಮಾಡಬಲ್ಲ ಶಕ್ತಿ ಇವಳಿಗಿರಲಿಲ್ಲ, ಇವಳ ಮಾತನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಅವನೂ ಇರಲಿಲ್ಲ. ಹಾಗಾಗಿ ಈ ಮಾರ್ಗವನ್ನು ಕೈಬಿಟ್ಟು, ಅದಕ್ಕೆ ಬೇರೆ ಏನಾದರೂ ಉಪಾಯ ಹುಡುಕಬೇಕು ಎಂದು ಯೋಚಿಸತೊಡಗಿದಳು. ತಲೆಗೆ ಏಟು ಬಿದ್ದಿದ್ದ ಪಕ್ಷದ ನಾಯಕನಿಗೇ ಪ್ರಜ್ಞೆ ಬಂದಿರುವಾಗ, ಆ ನಾಯಕನ ಮಾತುಗಳನ್ನು ಕೇಳಿ ಕೇಳಿ ಧರ್ಮದ ಅಮಲು ತಲೆಗೇರಿಸಿಕೊಂಡ ಗಂಡ ಕ್ರಮೇಣ ಪ್ರಜ್ಞೆ, ವಿವೇಕ ಕಳೆದುಕೊಳ್ಳುತ್ತಿದ್ದುದು ಈಕೆಗೆ ಕಳವಳ ಉಂಟು ಮಾಡಿತ್ತು. ತನ್ನ ಗಂಡನು ಆ ಕೃತ್ಯದಲ್ಲಿ ಭಾಗವಹಿಸದಂತೆ ತಡೆಯಲು ಇದ್ದ ಒಂದೇ ಒಂದು ಮಾರ್ಗವೆಂದರೆ, ಆ ಜಾಥಾ ಮುಗಿಯುವವರೆಗೆ ಅವನನ್ನು ಮನೆಯಿಂದ ಹೊರಗೆ ಹೋಗದಂತೆ ನೋಡಿಕೊಳ್ಳುವುದು. ಆದರೆ ಅದನ್ನು ಮಾಡುವ ಬಗೆ ಹೇಗೆ ಎಂದು ಬಹಳಷ್ಟು ಯೋಚಿಸಿದ ಅವಳಿಗೆ ಕೊನೆಗೂ ಒಂದು ಮಾರ್ಗ ತೋರಿತು. ಮಗುವಿಗೆ ಕೊಡಬೇಕಾಗಿದ್ದ ಫಿಟ್ಸ್‌ನ ಔಷಧಿ ಈಗ ಮಗುವಿಗಿಂತ ಹೆಚ್ಚಾಗಿ ಗಂಡನಿಗೆ ಅಗತ್ಯವಿದೆ ಎಂದು ಇವಳಿಗೆ ಅನಿಸಿತು. ಈ ಔಷಧಿಯನ್ನು ಹಾಕಿಯಾದರೂ ಅವನನ್ನು ಆ ಜಾಥಾ ಮುಗಿಯುವವರೆಗೆ ಮಲಗಿಸಬೇಕೆಂದು ನಿರ್ಧರಿಸಿದಳು.

ತನ್ನ ಧರ್ಮದ ರಕ್ಷಣೆಗಾಗಿ 'ಆ ಧರ್ಮದ' ಮುಖಂಡನ ತಲೆಯನ್ನು ಇಂದು ಉರುಳಿಸಿ ಸೇಡು ತೀರಿಸಿಕೊಳ್ಳುತ್ತೇನೆ ಎಂಬ ಯೋಚನೆಯಿಂದ ಈತನಿಗೆ ಏನೋ ಒಂದು ಬಗೆಯ ಉನ್ಮಾದ ಬಂದಂತಿತ್ತು. ರೋಷಾವೇಶಗಳಿಂದ ಮನಸ್ಸು ಕೆನೆಯುತ್ತಿತ್ತು. ಇದೇ ಉನ್ಮಾದದಲ್ಲಿ ಹೆಂಡತಿಯು ಕೊಟ್ಟ, ತಾನು ಇಷ್ಟಪಡುವ ಬೇಲದ ಹಣ್ಣಿನ ಜ್ಯೂಸ್ ಕುಡಿದ. ಅದರಲ್ಲಿ ಅವನಿಗೆ ಗೊತ್ತಿಲ್ಲದಂತೆ ಬೆರೆತಿದ್ದ ಔಷಧಿಯ ಪರಿಣಾಮದಿಂದ ತೂಕಡಿಕೆ ಶುರುವಾಯಿತು. ಜೇಬಿನಲ್ಲಿ ರೆಡಿಯಾಗಿಟ್ಟಿದ್ದ ಚಾಕುವನ್ನು ಒಮ್ಮೆ ಮುಟ್ಟಿ ನೋಡಿದ. ಜಾಥಾ ಬರಲು ಇನ್ನೂ ಒಂದು ಗಂಟೆ ಸಮಯವಿತ್ತು. ಸಂಜೆಯ ಮಳೆ ಬಂದು ನಿಂತಿತ್ತು. ಮೂರು ದಿನಗಳಿಂದ ಬಾರದ ನಿದ್ರೆ ಇಂದೇಕೋ ಒತ್ತರಿಸಿಕೊಂಡು ಬರುತ್ತಿದೆ ಎಂದುಕೊಂಡ.

ಔಷಧಿಯ ಪ್ರಭಾವದಿಂದಲೋ ಅಥವಾ ನಿದ್ರೆಯ ಮಂಪರಿನಿಂದಲೋ ಅಂತೂ ಈತನ ತಲೆಗೇರಿದ್ದ ಆವೇಶ ಇಳಿಯತೊಡಗಿತು. ತಾನು ಆ ಧರ್ಮದ ಮುಖಂಡನನ್ನು ಕೊಲೆ ಮಾಡಿ ಜೈಲಿಗೆ ಹೋದರೆ ಹೆಂಡತಿ ಮಕ್ಕಳ ಭವಿಷ್ಯದ ಗತಿಯೇನು ಎಂಬ ಚಿಂತೆ ಈಗ ನಿಧಾನವಾಗಿ ಮನಸ್ಸಿನೊಳಗೆ ನುಸುಳತೊಡಗಿತು. ಮಗು ಮತ್ತು ಹೆಂಡತಿಯನ್ನು ಕೊನೆಯ ಬಾರಿಗೆ ಎಂಬಂತೆ ನೋಡಿದ. ಮಗುವನ್ನು ಹೆಂಡತಿ ಮಡಿಲಲ್ಲಿ ಹಾಕಿಕೊಂಡು ಸಾರಿಗೆ ಸೊಪ್ಪು ಬಿಡಿಸುತ್ತಿದ್ದಳು. ಮಗುವಿನ ಮುಖವನ್ನು ಒಮ್ಮೆ ದೃಷ್ಟಿಸಿದ. ಮಗುವೂ ಅವನ ಮುಖವನ್ನೇ ನೋಡುತ್ತಿತ್ತು. ಇಬ್ಬರ ನೋಟಗಳೂ ಬೆರೆತವು. ತನ್ನ ಮುಖವನ್ನೇ ನೋಡುತ್ತಿದ್ದ ಮಗುವಿನ ಅಸಹಾಯಕ ಮುಗ್ಧ ನೋಟ ಈತನಿಗೆ ಇರಿಯುವಂತಿತ್ತು. ಆ ನೋಟದಲ್ಲಿ ತಾನು ಉತ್ತರಿಸಲಾಗದ ನೂರಾರು ಪ್ರಶ್ನೆಗಳಿವೆ ಎಂದು ಅನಿಸಿತು. ತಕ್ಷಣ ಎದೆಯಲ್ಲಿ ಏನೋ ಸಂಕಟ, ತಲ್ಲಣ, ಪಶ್ಚಾತ್ತಾಪದಿಂದ ಅವನಿಗರಿವಿಲ್ಲದಂತೆ ಕಣ್ಣೀರು ಹರಿಯತೊಡಗಿತು. ಮಗುವಿನ ಆ ನೋಟವು ಈತನ ಹೃದಯದಲ್ಲಿನ ಎಂದೂ ಮಿಡಿದಿರದ ಯಾವುದೋ ತಂತಿಯನ್ನು ಮೀಟಿದಂತಾಯಿತು.

ಇವನು ಭಾವುಕನಾಗಿ ಜೀವನದಲ್ಲಿ ಪ್ರಥಮ ಬಾರಿಗೆ ಎಂಬಂತೆ ತನ್ನ ಕುಟುಂಬದ ಬಗ್ಗೆ ಯೋಚಿಸಿ, ಕಂಬನಿ ಮಿಡಿಯುತ್ತಿದ್ದಾಗ ಬಾಗಿಲ ಬಳಿ ಗದ್ದಲವಾಯಿತು. ಯಾರೋ ದಬದಬನೇ ಬಾಗಿಲು ಬಡಿದರು. ಈತ ಬಾಗಿಲು ತೆಗೆದಾಕ್ಷಣ ಕೈಯಲ್ಲಿ ಹಲವು ಹತ್ಯಾರಗಳನ್ನು ಹಿಡಿದಿದ್ದ ಎಂಟತ್ತು ಜನರ ಗುಂಪು ಒಳಗೆ ನುಗ್ಗಿತು. ಅವರು ಈತನನ್ನು ಮುಗಿಸಲೆಂದೇ ಬಂದಂತಿತ್ತು. ಈ